(ಇಂದು ದಿನಾಂಕ03-07-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

ಪಾಟೀ ಸವಾಲು ಃ 2 ನೇ ಎದ್ರುದಾರರ ಪರವಾಗಿ ಶ್ರೀ ಆರ್.ಕೆ .ಎನ್. ವಕೀಲರಿಂದ.

ಕೆ.ಎ. 31 ವೈ 1818 ನನ್ನ ಸ್ವಂತ ಬೈಕು. ಆ ದಿನ ತಾಳಗುಪ್ಪಾನಿಂದ ನೆಜ್ಜೂರು ಕಡೆ ಹೋಗುತ್ತಿದ್ದೆ. ನನಗೆ ಚಾಲನ ಪರವಾನಿಗೆ ಇದೆ ಆದರೆಹಾಜರುಮಾಡಿಲ್ಲ. ನನಗೆ ಚಾಲನಾ ಪರವಾನಿಗೆ ಇಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ ಅಂದರೆ ಸರಿಯಲ್ಲ. ಆ ದಿನ ನನ್ನ ಬೈಕನ್ನು ನಾನು ಜೋರಾಗಿ ಚಲಾಯಿಸುತ್ತಿದ್ದೆ ಅಂದರೆ ರಿಯಲ್ಲ. ಆಟೋ ರಿಕ್ಷಾ ನಂ. ಕೆಎ 15 ಎ 0025 ತನ್ನ ಎಡಗಡೆಗೆ ನಿಧಾನವಾಗಿ ಬರುತ್ತಿತ್ತು ಅಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಅಗಿದೆ ಹೊರತಾಗಿ ನನ್ನ ಎದುರದಾರರ ವಾಹನದಿಂದ ಆಗಿಲ್ಲ ಅಂದರೆ ಸರಿಯಲ್ಲ.

ಸಾಗರ ಆಸ್ಪತ್ರೆಯ ವೈದ್ಯಕೀಯ ದಾಖಲೆಗಳನ್ನು ನಾನು ಹಾಜರುಮಾಡಿಲ್ಲ. ಶಿವಮೊಗ್ಗಾದ ಮೆಗ್ಗಾನ್ ಅಸ್ಪತ್ರೆಗೆ ಹೋಗುವಂತೆ ಬರೆದುಕೊಂಟ್ಟಿಲ್ಲ. ದಿನಾಂಕಃ 26-01-2019 ರಿಂದ ದಿನಾಂಕಃ 06-02-2019 ಮತ್ತು ಇನ್ನೊಮ್ಮೆ ದಿನಾಂಕಃ08-03-2019 ರಿಂದ ದಿನಾಂಕಃ 22-03-2019 ರ ವರೆಗೆ ಚಿಕಿತ್ಸೆ ಪಡೆದಿಲ್ಲ ಅಂದರೆ ಸರಿಯಲ್ಲ. ಮೆಗ್ಗಾನ್ ಅಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ತೆಗೆದುಕೊಂಡು ಸುಮಾರು 80 ಸಾವಿರ ರೂಪಾಯಿ ಖರ್ಚಾಯಿತು ಎನ್ನುವ ವಿವರ ಸುಳ್ಳು ಅಂದರೆ ಸರಿಯಲ್ಲ. ಮಣಿಪಾಲ ಆಸ್ಪತೆಗೆ ದಿನಾಂಕಃ 02-05-2019 ರಿಂದ 04-05-2019 ಮತ್ತು ದಿನಾಂಕಃ 08-07-2019 ರಿಂದ ದಿನಾಂಕಃ 11-07-2019 ರ ವರಗೆ ದಾಖಲಾಗಿ ಚಿಕಿತ್ಸೆ ಪಡೆದಿರುವ ವಿವರ ಸುಳ್ಳು ಅಂದರೆ ಸರಿಯಲ್ಲ. ನನಗೆ ಕೈ ಊನವಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆಸ ರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತಿದ್ದು ಅದರಿಂದ ನನಗೆ ತಿಂಗಳಿಗೆ 20 ಸಾವಿರ ಆದಾಯ ಬರುತ್ತಿತ್ತು ಎನ್ನುವ ವಿವರ ಸುಳ್ಳು ಎಂದರೆ ಸರಿಯಲ್ಲ.

ಎದ್ರುದಾರರ ವಾಹನಕ್ಕೆ ಆರ್.ಸಿ. ಎಫ್.ಸಿ. ಮತ್ತು ಪರ್ಮಿಟ್ಟು ಮತ್ತು ಚಾಲನಾ ಪರವಾನಿಗೆ ಇಲ್ಲದ ಕಾರಣ ವಿಮಾ ಶರತ್ತು ಉಲ್ಲಂಘಣೆ ಅಗಿದ್ದು2 ನೇ ಎದ್ರುದಾರರು ಪರಿಹಾರ ಕೊಡಲು ಬಾದ್ಯಸ್ಥಗಾರರಲ್ಲ ಅಂದರೆ ಸರಿಯಲ್ಲ. ಅಂದರೆ ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ. ಗೂಡ್ಸ ರಿಕ್ಷಾ

ಪಿ.ಡಬ್ಲ್ಯೂ-2

ಚಾಲಕನಿಗೆ ಆ ದಿನ ಚಾಲನಾ ಪರವಾನಿಗೆ ಇಲ್ಲದ ಕಾರಣ ಮೋಟಾರು ವಾಹನ ಕಾಯ್ದೆ ಯಡಿ ಪ್ರಕರಣ ದಾಖಲಾಗಿದೆ ಎಂದರೆ ಸರಿ. ನನಗೆ 37 ವರ್ಷ ಆಗಿದೆ ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನನ್ನ ಬೈಕಿಗೆ ಸಂಪೂರ್ಣ ಇನ್ಸುರೆನ್ಸ ಇತ್ತು.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಶಿರಸಿ.

(ಪೀಠಾಸೀನ ಸಿದ್ದಾಪುರ)